# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಸೋಮವಾರ, ೨೪, ಆಗಸ್ಟ್, ೨೦೨೬ (ಭಾದ್ರಪದ, ೦೨, ಶಕವರ್ಷ, ೧೯೪೮)<br>BENGALURU, MONDAY, 24, AUGUST, 2026 (BHADRAPADA , 02, SHAKAVARSHA, 1948) | ನಂ. ೭೬೫<br>No. 765 |


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಹತ್ತನೇ ಅಧಿವೇಶನ**

## ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–23)**

ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 8)ನ್ನು, ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 3ರ ತಿದ್ದುಪಡಿ.-** ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 8)ರ, (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದ, (1)ನೇ ಉಪ-ಪ್ರಕರಣದಲ್ಲಿನ (ಜೆ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

“(ಕೆ) ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸಮಾಡುವ ಪರಿಸ್ಥಿತಿಗಳ ಸಂಹಿತೆ, 2020 (2020ರ ಕೇಂದ್ರ ಅಧಿನಿಯಮ 37) ರಡಿ ಈಗಾಗಲೇ ನೋಂದಾಯಿಸಿರುವ, ಹತ್ತು ಅಥವಾ ಹೆಚ್ಚಿನ ಕಾರ್ಮಿಕರನ್ನು ನಿಯೋಜಿಸಲಾಗಿರುವ ಕಾರ್ಯಸಂಸ್ಥೆಗಳಿಗೆ,:

“ಪರಂತು, ಮೂಲ ಕಾರ್ಯಸಂಸ್ಥೆಯಿಂದ ನೂರು ಮೀಟರುಗಳ ಅಂತರದೊಳಗೆ ಇರುವ ಗೋದಾಮು ಅಥವಾ  ದಾಸ್ತಾನು ಸೌಲಭ್ಯಗಳಿಗಾಗಿ ಪ್ರತ್ಯೇಕ ನೋಂದಣಿಯ ಅವಶ್ಯಕತೆ ಇರತಕ್ಕದ್ದಲ್ಲ.”

**3. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿರುವ,-

(1) ಉಪ-ಪ್ರಕರಣ (1)ರಲ್ಲಿರುವ “ನಿಯಮಿಸಬಹುದಾದಂಥ” ಎಂಬ ಪದದ ಮೊದಲು “ಡಿಜಿಟಲ್ ಅಥವಾ ಆನ್‌ಲೈನ್ ಮಾಧ್ಯಮದ ಮೂಲಕ" ಎಂಬ ಪದಗಳನ್ನು ಸೇರಿಸತಕ್ಕದ್ದು;

(2) ಉಪ-ಪ್ರಕರಣ (2)ರಲ್ಲಿರುವ “ನಿಯಮಿಸಬಹುದಾದಂಥ ರೀತಿಯಲ್ಲಿ” ಎಂಬ ಪದಗಳಿಗೆ ಮೊದಲು “ಡಿಜಿಟಲ್ ಅಥವಾ ಆನ್‌ಲೈನ್ ಮಾಧ್ಯಮದ ಮೂಲಕ" ಎಂಬ ಪದಗಳನ್ನು ಸೇರಿಸತಕ್ಕದ್ದು;

(3) ಉಪ-ಪ್ರಕರಣ (3ಎ)ರಲ್ಲಿ “30 ದಿನಗಳೊಳಗೆ” ಎಂಬ ಪದಗಳ ಬದಲಾಗಿ “ಏಳು ದಿನಗಳೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(4) ಉಪ-ಪ್ರಕರಣ (4)ರಲ್ಲಿರುವ “ನಿಯಮಿಸಬಹುದಾದಂಥ” ಎಂಬ ಪದದ ಮೊದಲು “ಡಿಜಿಟಲ್ ಅಥವಾ ಆನ್‌ಲೈನ್ ಮಾಧ್ಯಮದ ಮೂಲಕ" ಎಂಬ ಪದಗಳನ್ನು ಸೇರಿಸತಕ್ಕದ್ದು;

(5) ಉಪ-ಪ್ರಕರಣ (5)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

“(5) ಪ್ರಕರಣ 4ರಡಿ ಒಮ್ಮೆ ಮಾಡಲಾದ ನೋಂದಣಿಯು ಕಾರ್ಯಸಂಸ್ಥೆಯ ವ್ಯವಹಾರ ಮುಕ್ತಾಯ ಅಥವಾ ಅಂತ್ಯದವರೆಗೆ ಸಿಂಧುವಾಗಿರತಕ್ಕದ್ದು.”

(6) ಉಪ-ಪ್ರಕರಣ (6)ನ್ನು ಬಿಟ್ಟುಬಿಡತಕ್ಕದ್ದು.

(7) ಉಪ-ಪ್ರಕರಣ (8)ರಲ್ಲಿರುವ “ಆರು ತಿಂಗಳುಗಳಿಗಿಂತ ಕಡಿಮೆಯಿರದ ಕಾರಾವಾಸದೊಂದಿಗೆ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ” ಎಂಬ ಪದಗಳಿಗೆ ಬದಲಾಗಿ “ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು;

**4. ಪ್ರಕರಣ 6ರ ತಿದ್ದುಪಡಿ.-** ಮೂಲ ಅಧಿನಿಯಮದ 6ನೇ ಪ್ರಕರಣದಲ್ಲಿರುವ “ಪರಿಶೀಲಕನಿಗೆ ಬರಹದಲ್ಲಿ” ಎಂಬ ಪದಗಳ ಬದಲಾಗಿ “ಪರಿಶೀಲಕನಿಗೆ ಡಿಜಿಟಲ್ ಅಥವಾ ಆನ್‌ಲೈನ್ ಮಾಧ್ಯಮದ ಮೂಲಕ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. ಹೊಸ ಪ್ರಕರಣ 6-ಬಿ ಮತ್ತು 6-ಸಿ ಸೇರ್ಪಡೆ.-** ಮೂಲ ಅಧಿನಿಯಮದ 6ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

“**6-ಬಿ. ಸೇವಾ ಪ್ರಮಾಣಪತ್ರದ ನೀಡಿಕೆ.-** ಪ್ರತಿಯೊಬ್ಬ ನಿಯೋಜಕನು ನಿಯಮಿಸಬಹುದಾದಂಥ ವಿಧಾನದಲ್ಲಿ ಅಂಥ ನಿಯೋಜಿತನಿಂದ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಿಯೋಜಿತನ ಸೇವಾ ಪ್ರಮಾಣಪತ್ರವನ್ನು ನೀಡತಕ್ಕದ್ದು.

**6-ಸಿ. ದಸ್ತಾವೇಜುಗಳನ್ನು ಇರಿಸಿಕೊಳ್ಳುವುದರ ನಿಷೇಧ.-** ಯಾರೇ ನಿಯೋಜಕನು ನೇಮಕಾತಿ ಸಮಯದಲ್ಲಿ ಅಥವಾ ಉದ್ಯೋಗ ಮಾಡುವ ಅವಧಿಯಲ್ಲಿ ನಿಯೋಜಿತನ ಮೂಲ ಶೈಕ್ಷಣಿಕ ಪ್ರಮಾಣಪತ್ರಗಳು, ಅನುಭವ ಪ್ರಮಾಣಪತ್ರಗಳು ಅಥವಾ ನಿಯೋಜಿತನ ಯಾವುದೇ ಇತರ ಮೂಲ ದಸ್ತಾವೇಜುಗಳನ್ನು ಇರಿಸಿಕೊಳ್ಳತಕ್ಕದ್ದಲ್ಲ.”

**6. ಪ್ರಕರಣ 21ರ ತಿದ್ದುಪಡಿ.-** ಮೂಲ ಅಧಿನಿಯಮದ 21ನೇ ಪ್ರಕರಣದಲ್ಲಿ,-

(1) ಶೀರ್ಷಿಕೆಯಲ್ಲಿರುವ “ಮಜೂರಿಗಳ ಸಂದಾಯ ಅಧಿನಿಯಮದ” ಎಂಬ ಪದಗಳಿಗೆ ಬದಲಾಗಿ “ವೇತನ ಸಂಹಿತೆಯ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(2) “ಮಜೂರಿಗಳ ಸಂದಾಯ ಅಧಿನಿಯಮ, 1936 (ಕೇಂದ್ರ ಅಧಿನಿಯಮ 1936ರ IV) ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ ಬದಲಾಗಿ “ವೇತನ ಸಂಹಿತೆ, 2019, (2019ರ ಕೇಂದ್ರ ಅಧಿನಿಯಮ 29)” ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

**7. ಪ್ರಕರಣ 22ರ ತಿದ್ದುಪಡಿ.-** ಮೂಲ ಅಧಿನಿಯಮದ 22ನೇ ಪ್ರಕರಣದಲ್ಲಿರುವ,-

(1) ಶೀರ್ಷಿಕೆಯಲ್ಲಿರುವ “ಕಾರ್ಮಿಕರ ನಷ್ಟಪರಿಹಾರ ಅಧಿನಿಯಮದ” ಎಂಬ ಪದಗಳಿಗೆ ಬದಲಾಗಿ “ಸಾಮಾಜಿಕ ಭದ್ರತಾ ಸಂಹಿತೆಯ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(2) “ಕಾರ್ಮಿಕರ ನಷ್ಟಪರಿಹಾರ ಅಧಿನಿಯಮ, 1923 (ಕೇಂದ್ರ ಅಧಿನಿಯಮ 1923ರ VII) ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ ಬದಲಾಗಿ “ಸಾಮಾಜಿಕ ಭದ್ರತಾ ಸಂಹಿತೆ, 2020, (2020ರ ಕೇಂದ್ರ ಅಧಿನಿಯಮ 36)” ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

**8. ಪ್ರಕರಣ 25ರ ತಿದ್ದುಪಡಿ.-** ಮೂಲ ಅಧಿನಿಯಮದ 25ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿರುವ (ಎಚ್), (ಐ), (ಜೆ), (ಕೆ), (ಎಲ್), (ಎಮ್), (ಎನ್) ಮತ್ತು (ಓ) ಖಂಡಗಳನ್ನು ಬಿಟ್ಟುಬಿಡತಕ್ಕದ್ದು.

**9. ಪ್ರಕರಣ 30ರ ತಿದ್ದುಪಡಿ.-** ಮೂಲ ಅಧಿನಿಯಮದ 30ನೇ ಪ್ರಕರಣದಲ್ಲಿ,-

(i) ಉಪಪ್ರಕರಣ (1)ರಲ್ಲಿನ,-

(ಎ) “6ಎ” ಅಂಕಿ ಮತ್ತು ಅಕ್ಷರದ ತರುವಾಯ “6ಬಿ, 6ಸಿ” ಅಂಕಿಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು.

(ಬಿ) “ಒಂದು ಸಾವಿರ” ಎಂಬ ಪದಗಳಿಗೆ ಬದಲಾಗಿ “ಮೂರು ಸಾವಿರ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) “ಎರಡು ಸಾವಿರ” ಎಂಬ ಪದಗಳಿಗೆ ಬದಲಾಗಿ “ಐದು ಸಾವಿರ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಉಪಪ್ರಕರಣ (2)ರಲ್ಲಿರುವ “ಎರಡು ನೂರಾ ಐವತ್ತು ರೂಪಾಯಿಗಳಿಗೆ” ಎಂಬ ಪದಗಳಿಗೆ ಬದಲಾಗಿ “ಎರಡು ಸಾವಿರ ರೂಪಾಯಿಗಳಿಗೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) ಉಪಪ್ರಕರಣ (3) ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

“(3) ಪ್ರಕರಣ 24 ಮತ್ತು 25ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಜುಲ್ಮಾನೆಯಿಂದ ದಂಡಿತರಾಗತಕ್ಕದು.”

**10. ಪ್ರಕರಣ 33ರ ತಿದ್ದುಪಡಿ.-** ಮೂಲ ಅಧಿನಿಯಮದ 33ನೇ ಪ್ರಕರಣದಲ್ಲಿರುವ “ಐದು ನೂರು ರೂಪಾಯಿಗಳಿಗೆ” ಎಂಬ ಪದಗಳಿಗೆ ಬದಲಾಗಿ “ಹತ್ತು ಸಾವಿರ ರೂಪಾಯಿಗಳಿಗೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**11. ಪ್ರಕರಣ 33ಎ ತಿದ್ದುಪಡಿ.-** ಮೂಲ ಅಧಿನಿಯಮದ 33ಎ ಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**“33ಎ. ಅಪರಾಧಗಳ ರಾಜಿ.-** (1) ಅಧಿಕಾರವ್ಯಾಪ್ತಿಯ ಕಾರ್ಮಿಕ ಅಧಿಕಾರಿಯು ಈ ಅಧಿನಿಯಮ ಅಥವಾ ಅದರಡಿ ರಚಿಸಲಾದ ನಿಯಮಗಳಡಿಯ ಯಾವುದೇ ಅಪರಾಧಕ್ಕಾಗಿ,-

(ಎ) ಮೊದಲ ಅಪರಾಧಕ್ಕಾಗಿ ನಿಯಮಿಸಲಾದ ಜುಲ್ಮಾನೆಯ ಶೇಕಡಾ ಐವತ್ತರಷ್ಟು;

(ಬಿ) ಎರಡನೇ ಅಥವಾ ತರುವಾಯದ ಅಪರಾಧಕ್ಕಾಗಿ ನಿಯಮಿಸಲಾದ ಜುಲ್ಮಾನೆಯ ಶೇಕಡಾ ಎಪ್ಪತ್ತೈದರಷ್ಟು;

-ಸಂಗ್ರಹಿಸಿ ರಾಜಿಯನ್ನು ಮಾಡಬಹುದು.

(2) ಒಂದು ವರ್ಷದ ಅವಧಿಯಲ್ಲಿ ಅದೇ ವ್ಯಕ್ತಿಯು ಎರಡಕ್ಕಿಂತ ಹೆಚ್ಚುಬಾರಿ ಅದೇ ಸ್ವರೂಪದ ಅಪರಾಧವನ್ನು ಎಸಗಿದಲ್ಲಿ ರಾಜಿಯನ್ನು ಮಾಡತಕ್ಕದ್ದಲ್ಲ.

(3) ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ ಹೊರತು ದಂಡವನ್ನು ವಿಧಿಸತಕ್ಕದ್ದಲ್ಲ.”

**12. ಹೊಸ ಪ್ರಕರಣ 33ಬಿ ಸೇರ್ಪಡೆ.-** ಮೂಲ ಅಧಿನಿಯಮದ 33ಎ ಪ್ರಕರಣದ ತರುವಾಯ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

“**33-ಬಿ. ಅಪೀಲು.-** (1) ಪ್ರಕರಣ 33ಎ ಅಡಿಯಲ್ಲಿ ಮಾಡಿದ ಆದೇಶದ ಮೂಲಕ ಬಾಧಿತನಾದ ಯಾರೇ ವ್ಯಕ್ತಿಯು, ಸರ್ಕಾರವು ಅಧಿಸೂಚಿಸಬಹುದಾದಂಥ ಮೇಲ್ಮನವಿ ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಪ್ರತಿಯೊಂದು ಅಪೀಲನ್ನು ಆದೇಶ ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಉಪಪ್ರಕರಣ (1)ರಡಿಯಲ್ಲಿ ದಾಖಲಿಸತಕ್ಕದ್ದು.

(3) ಆದೇಶಿಸಲಾಗಿರುವ ಜುಲ್ಮಾನೆಯ ಮೊತ್ತವನ್ನು ಕಟ್ಟಿದ ಹೊರತು ಅಪೀಲನ್ನು ಸ್ವೀಕರಿಸತಕ್ಕದ್ದಲ್ಲ.

(4) ಅಪೀಲನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಅರವತ್ತು ದಿನಗಳೊಳಗಾಗಿ ವಿಲೆ ಮಾಡತಕ್ಕದ್ದು:

ಪರಂತು, ಮೇಲ್ಮನವಿ ಪ್ರಾಧಿಕಾರಿಯು ಸಹಾಯಕ ಕಾರ್ಮಿಕ ಆಯುಕ್ತನ ದರ್ಜೆಗಿಂತ ಕಡಿಮೆಯಿಲ್ಲದ ಅಧಿಕಾರಿಯಾಗಿರತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ,-

(1) ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ 2020 (2020ರ ಕೇಂದ್ರ ಅಧಿನಿಯಮ 37)ರಡಿ ಈಗಾಗಲೇ ನೋಂದಾಯಿತ ಕಾರ್ಯಸಂಸ್ಥೆಗಳಿಗೆ ನೋಂದಣಿಯಿಂದ ವಿನಾಯಿತಿ ನೀಡಲು;

(2) ಶುಲ್ಕಗಳನ್ನು ವಿದ್ಯುನ್ಮಾನ ಅಥವಾ ಡಿಜಿಟಲ್ ಮಾಧ್ಯಮದ ಮೂಲಕ ಪಾವತಿಸುವುದನ್ನು ಪರಿಚಯಿಸಲು;

(3) ಪ್ರಕರಣ 6ಬಿ ಮತ್ತು 6ಸಿ ಸೇರಿಸುವ ಮೂಲಕ ಅನುಕ್ರಮವಾಗಿ ಸೇವಾ ಪ್ರಮಾಣ ಪತ್ರವನ್ನು ನೀಡುವುದು ಹಾಗೂ ದಸ್ತಾವೇಜುಗಳನ್ನು ಇರಿಸಿಕೊಳ್ಳುವುದನ್ನು ನಿಷೇಧಿಸಲು;

(4) ಅಪರಾಧಗಳ ನಿರಪರಾಧೀಕರಣ ಮತ್ತು ತರ್ಕಬದ್ಧಗೊಳಿಸಲು ಹಾಗೂ ಜೀವನವನ್ನು ಮತ್ತು ವ್ಯವಹಾರ ನಡೆಸುವುದನ್ನು ಸರಳಗೊಳಿಸುವುದಕ್ಕಾಗಿ ನಂಬಿಕೆ ಆಧಾರಿತ ಆಡಳಿತವನ್ನು ಮತ್ತಷ್ಟು ವೃದ್ಧಿಸಲು; ಮತ್ತು

(5) ಅಪರಾಧಗಳ ರಾಜಿ ಮತ್ತು ಅಪೀಲು ಮಾಡುವುದಕ್ಕೆ ಸಂಬಂಧಿಸಿದ ಉಪಬಂಧಗಳನ್ನು ನಿಯಮಿಸಲು,

- ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 8)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ,

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ಸಂತೋಷ್ ಲಾಡ್**
ಕಾರ್ಮಿಕ ಮತ್ತು ಉದ್ಯೋಗ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

### ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 8) ಉದ್ಧೃತ ಭಾಗ

**XXX XXX XXX**

**1) ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.-** (1) ಈ ಅಧಿನಿಯಮವನ್ನು ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

(4) (ಎ) ಅದು, ಮೊದಲನೆಯದಾಗಿ, ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶಗಳಿಗೆ ಮತ್ತು 42ನೇ ಪ್ರಕರಣದ ಮೂಲಕ ನಿರಸನಗೊಂಡ ಯಾವುದೇ ಅಧಿನಿಯಮವು ಅನ್ವಯವಾಗಿದ್ದಂಥ ಇತರ ಪ್ರದೇಶಗಳಿಗೆ ಅನ್ವಯವಾಗತಕ್ಕದ್ದು.

(ಬಿ) ಅದು, ಯಾವುದೇ ಇತರ ಪ್ರದೇಶಕ್ಕೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗಿ ಅನ್ವಯವಾಗತಕ್ಕದ್ದು; ಆ ದಿನಾಂಕವು ಸರ್ಕಾರಿ ರಾಜ್ಯಪತ್ರದಲ್ಲಿ ಅಂಥ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಮೂರು ತಿಂಗಳುಗಳು ಮುಕ್ತಾಯವಾಗುವುದಕ್ಕೆ ಮುಂಚಿನದಾಗಿರತಕ್ಕದ್ದಲ್ಲ.

**XXX XXX XXX**

**4. ಕಾರ್ಯಸಂಸ್ಥೆಗಳ ನೋಂದಣಿ.-** (1) ಉಪ-ಪ್ರಕರಣ (3)ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಪ್ರತಿಯೊಂದು ಕಾರ್ಯಸಂಸ್ಥೆಯ ನಿಯೋಜಕನು ಸಂಬಂಧಪಟ್ಟ ಪ್ರದೇಶದ ಪರಿಶೀಲಕನಿಗೆ ನಿಯಮಿಸಬಹುದಾದಂಥ ಫೀಜುಗಳೊಂದಿಗೆ ನಿಯಮಿಸಿದ ನಮೂನೆಯಲ್ಲಿ,-

(ಎ) ನಿಯೋಜಕನು ಮತ್ತು ವ್ಯವಸ್ಥಾಪಕನು ಯಾರಾದರೂ ಇದ್ದರೆ ಆತನ ಹೆಸರು;

(ಬಿ) ಆ ಕಾರ್ಯಸಂಸ್ಥೆಯ ಅಂಚೆ ವಿಳಾಸ;

(ಸಿ) ಆ ಕಾರ್ಯಸಂಸ್ಥೆಯ ಹೆಸರು, ಯಾವುದಾದರೂ ಇದ್ದರೆ ಅದರ ಹೆಸರು;

(ಡಿ) ನಿಯಮಿಸಬಹುದಾದಂಥ ಇತರ ವಿವರಗಳು

- ಇವುಗಳನ್ನೊಳಗೊಂಡ ವಿವರಪತ್ರವನ್ನು ಕಳುಹಿಸತಕ್ಕದ್ದು.

(2) ಆ ವಿವರಪತ್ರವನ್ನು ಮತ್ತು ಫೀಜುಗಳನ್ನು ಸ್ವೀಕರಿಸಿದ ಮೇಲೆ ಪರಿಶೀಲಕನು ಆ ವಿವರಪತ್ರದ ಸರಿತನದ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ, ನಿಯಮಿಸಬಹುದಾದಂಥ ರೀತಿಯಲ್ಲಿ ಕಾರ್ಯಸಂಸ್ಥೆಗಳ ರಿಜಿಸ್ಟರಿನಲ್ಲಿ ಆ ಕಾರ್ಯಸಂಸ್ಥೆಯನ್ನು ನೋಂದಾಯಿಸತಕ್ಕದ್ದು ಮತ್ತು ನಿಯಮಿಸಿದ ನಮೂನೆಯಲ್ಲಿ ನಿಯೋಜಕನಿಗೆ ನೋಂದಣಿ ಪ್ರಮಾಣಪತ್ರವನ್ನು ಕೊಡತಕ್ಕದ್ದು. ನೋಂದಣಿ ಪ್ರಮಾಣಪತ್ರವನ್ನು ಆ ಕಾರ್ಯಸಂಸ್ಥೆಯಲ್ಲಿ ಎದ್ದುಕಾಣುವಂತೆ ಪ್ರದರ್ಶಿಸತಕ್ಕದ್ದು.

(3) ಈ ಕೆಳಗಿನ (1)ನೇ ಅಂಕಣದಲ್ಲಿ ನಮೂದಿಸಿದ ಕಾರ್ಯಸಂಸ್ಥೆಗೆ ಸಂಬಂಧಿಸಿದಂತೆ (2)ನೇ ಅಂಕಣದಲ್ಲಿ ನಮೂದಿಸಿದ ದಿನಾಂಕದಿಂದ ಮೂವತ್ತು ದಿವಸದೊಳಗೆ ಫೀಜುಗಳೊಂದಿಗೆ ಆ ವಿವರಪತ್ರವನ್ನು (1)ನೇ ಉಪ-ಪ್ರಕರಣದ ಮೇರೆಗೆ ಪರಿಶೀಲಕನಿಗೆ ಕಳುಹಿಸತಕ್ಕದ್ದು.

| ಕಾರ್ಯಸಂಸ್ಥೆಗಳು. | | ಯಾವ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯು ಪ್ರಾರಂಭವಾಗಬೇಕೋ ಆ ದಿನಾಂಕ | |
|---|---|---|---|
| (1) | | (2) | |
| (i) | ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು ಅಸ್ತಿತ್ವದಲ್ಲಿರುವ ಕಾರ್ಯಸಂಸ್ಥೆ. | (i) | ಈ ಅಧಿನಿಯಮ ಜಾರಿಗೆ ಬಂದ ದಿನಾಂಕ. |
| (ii) | ಹೊಸ ಕಾರ್ಯಸಂಸ್ಥೆಗಳು. | (ii) | ಕಾರ್ಯಸಂಸ್ಥೆಯು ಅದರ ಕೆಲಸವನ್ನು ಪ್ರಾರಂಭಿಸುವ ದಿನಾಂಕ. |

(3ಎ) (3)ನೇ ಉಪ-ಪ್ರಕರಣದ ಮೇರೆಗಿನ ಫೀಜುಗಳೊಂದಿಗೆ ಸಲ್ಲಿಸಿದ ವಿವರಪತ್ರದ ಸರಿತನದ ಬಗ್ಗೆ ಪರಿಶೀಲಕನಿಗೆ ಮನವರಿಕೆಯಾಗದಿದ್ದಲ್ಲಿ, ಅವನು ಅದನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನಗಳೊಳಗೆ, ಕಾರ್ಯಸಂಸ್ಥೆಯ ನೋಂದಣಿಯನ್ನು ನಿರಾಕರಿಸಿದ ಬಗ್ಗೆ ಅದರ ಕಾರಣಗಳೊಂದಿಗೆ, ತನ್ನ ನಿರ್ಣಯವನ್ನು ನಿಯೋಜಕನಿಗೆ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಕಾರ್ಯಸಂಸ್ಥೆಯನ್ನು ನೋಂದಣಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(4) (2)ನೇ ಉಪ-ಪ್ರಕರಣದ ಮೇರೆಗೆ ಕೊಟ್ಟ ನೋಂದಣಿ ಪ್ರಮಾಣಪತ್ರವು ಐದು ವರ್ಷಗಳವರೆಗೆ ಸಿಂಧುವಾಗಿರತಕ್ಕದ್ದು ಮತ್ತು ನೋಂದಣಿ ಪ್ರಮಾಣಪತ್ರದ ಅವಧಿಯು, ಮುಕ್ತಾಯಕ್ಕೆ ಮೊದಲು ನಿಯಮಿಸಬಹುದಾದಂಥ ಫೀಜುಗಳ ಸಂದಾಯದ ಮೇಲೆ ಮತ್ತು ಅಂಥ ರೀತಿಯಲ್ಲಿ ನವೀಕರಿಸತಕ್ಕದ್ದು.

(5) ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 1997 ರ ಪ್ರಾರಂಭಕ್ಕೆ ಮುಂಚೆ ನೀಡಿದ್ದ ಅಥವಾ ನವೀಕರಿಸಿದ್ದ ನೋಂದಣಿ ಪ್ರಮಾಣಪತ್ರವು, ಅಂಥ ಪ್ರಾರಂಭದ ದಿನಾಂಕದಿಂದ ಈಗಾಗಲೇ ಹಾಗೆ ನೀಡಿದ್ದ ನೋಂದಣಿ ಪ್ರಮಾಣಪತ್ರದ ಅವಧಿಯು, ಅದು ಮುಕ್ತಾಯವಾಗುವವರೆಗೆ ಸಿಂಧುವಾಗಿರುವುದು ಮುಂದುವರಿಯತಕ್ಕದ್ದು ಮತ್ತು ಅಂಥ ಪ್ರತಿಯೊಂದು ಕಾರ್ಯಸಂಸ್ಥೆಯ ನಿಯೋಜಕನು (4)ನೇ ಉಪ-ಪ್ರಕರಣದ ಅನುಸಾರ ಅಂಥ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ ತನ್ನ ನೋಂದಣಿ ಪ್ರಮಾಣಪತ್ರವನ್ನು ನವೀಕರಿಸತಕ್ಕದ್ದು.

(6) ವಿವರಪತ್ರದ ಅಥವಾ ನವೀಕರಣದ ಅರ್ಜಿಯ ಅಥವಾ ನಿಯಮಿಸಿದ ಫೀಜುಗಳ ಪಾವತಿಯ ಬಗ್ಗೆ ಅಥವಾ ನವೀಕರಣದ ಯಾವುದೇ ಇತರ ಷರತ್ತಿನ ಸರಿತನದ ಬಗ್ಗೆ ಪರಿಶೀಲಕನಿಗೆ ಮನವರಿಕೆಯಾಗದಿದ್ದಲ್ಲಿ, ನಿಯೋಜಕನು, ನೋಂದಣಿ ಪ್ರಮಾಣಪತ್ರದ ನವೀಕರಣಕ್ಕಾಗಿ ಕೋರಿ, ಶುಲ್ಕಗಳೊಂದಿಗೆ ಸಲ್ಲಿಸಿದ್ದ ವಿವರಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ, ಅದರ ನೋಂದಣಿಯ ನವೀಕರಣವನ್ನು ನಿರಾಕರಿಸಿದ್ದಕ್ಕಾಗಿನ ಕಾರಣಗಳೊಂದಿಗೆ ತನ್ನ ನಿರ್ಣಯವನ್ನು ಪರಿಶೀಲಕನು ನಿಯೋಜಕನಿಗೆ ತಿಳಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ, ನೋಂದಣಿ ಪ್ರಮಾಣಪತ್ರವನ್ನು ನವೀಕರಿಸಲಾಗಿದೆ ಎಂದು ಭಾವಿಸತಕ್ಕದ್ದು.

(7) ಯಾರೇ ನಿಯೋಜಕನು, ನೋಂದಣಿ ಪ್ರಮಾಣಪತ್ರವನ್ನು ಅಥವಾ ನೋಂದಣಿ ಪ್ರಮಾಣಪತ್ರದ ನವೀಕರಣವನ್ನು (3ಎ) ಅಥವಾ (6)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸ್ವೀಕರಿಸದಿದ್ದರೆ, ಅಂಥ ನಿಯೋಜಕನು, ಭಾವಿತ ಪ್ರಯೋಜನ ಪಡೆದಿದ್ದಾನೆ ಎಂದು ತಿಳಿಸಿ, ನೋಂದಣಿಗಾಗಿ ಅಥವಾ ಸಂದರ್ಭಾನುಸಾರ ನವೀಕರಣಕ್ಕಾಗಿ ಕೋರಿ ನೋಂದಣಿ ಪ್ರಾಧಿಕಾರಕ್ಕೆ ಸ್ವೀಕೃತಿ ಪತ್ರ ಸಹಿತವಾದ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದ ಸ್ವಪ್ರಮಾಣೀಕೃತ ವಿವರಣಪತ್ರವನ್ನು ಪ್ರದರ್ಶಿಸತಕ್ಕದ್ದು. ನೋಂದಣಿ ಪ್ರಮಾಣಪತ್ರವನ್ನು ಅಥವಾ ಸಂದರ್ಭಾನುಸಾರ ಪ್ರಮಾಣಪತ್ರದ ನವೀಕರಣವನ್ನು, ನಿಯೋಜಕನು ತರುವಾಯ ಸ್ವೀಕರಿಸಿದರೆ, ಅಂಥ ಕ್ರಮಬದ್ಧ ಪ್ರಮಾಣಪತ್ರವನ್ನು ಸ್ವೀಕರಿಸಿದ ಕೂಡಲೇ, ಸ್ವಪ್ರಮಾಣೀಕೃತ ಪತ್ರವನ್ನು ಬದಲಾಯಿಸತಕ್ಕದ್ದು.

(8) ಯಾರೇ ನಿಯೋಜಕನು (7)ನೇ ಉಪ-ಪ್ರಕರಣದ ಮೇರೆಗೆ ಭಾವಿತ ನೋಂದಣಿ ಪ್ರಯೋಜನವನ್ನು ತಪ್ಪಾಗಿ ಕ್ಲೇಮು ಮಾಡಿದರೆ ಮತ್ತು ಅಂಥ ಸ್ವಪ್ರಮಾಣೀಕೃತ ಪ್ರಮಾಣಪತ್ರವನ್ನು ಪ್ರದರ್ಶಿಸಿದರೆ, ಅವನು, ಆರು ತಿಂಗಳುಗಳಿಗಿಂತ ಕಡಿಮೆಯಿರದ ಕಾರಾವಾಸದೊಂದಿಗೆ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಶಿಕ್ಷೆಗೆ ಗುರಿಯಾಗತಕ್ಕದ್ದು.

**XXX XXX XXX**

**6. ಕಾರ್ಯಸಂಸ್ಥೆಯನ್ನು ಮುಚ್ಚುವ ಬಗ್ಗೆ ಪರಿಶೀಲಕನಿಗೆ ತಿಳಿಸುವುದು.-** ನಿಯೋಜಕನು, ತನ್ನ ಕಾರ್ಯಸಂಸ್ಥೆಯನ್ನು ಮುಚ್ಚಿದ ಹದಿನೈದು ದಿವಸಗಳೊಳಗಾಗಿ, ಅಂಥ ಮುಚ್ಚುವಿಕೆಯ ದಿನಾಂಕವನ್ನು ಪರಿಶೀಲಕನಿಗೆ ಬರಹದಲ್ಲಿ ತಿಳಿಸತಕ್ಕದ್ದು ಮತ್ತು ನೋಂದಣಿ ಪ್ರಮಾಣಪತ್ರವನ್ನು ಹಿಂತಿರುಗಿಸತಕ್ಕದ್ದು. ಪರಿಶೀಲಕನು ಮಾಹಿತಿಯನ್ನು ಸ್ವೀಕರಿಸಿದ ಮೇಲೆ ಮತ್ತು ಅದರ ಸರಿತನದ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ಅಂಥ ಕಾರ್ಯಸಂಸ್ಥೆಯನ್ನು ಕಾರ್ಯಸಂಸ್ಥೆಗಳ ರಿಜಿಸ್ಟರಿನಿಂದ ತೆಗೆದುಹಾಕತಕ್ಕದ್ದು ಮತ್ತು ನೋಂದಣಿ ಪ್ರಮಾಣಪತ್ರವನ್ನು ರದ್ದುಪಡಿಸತಕ್ಕದ್ದು:

ಪರಂತು, ಪರಿಶೀಲಕನು ಮಾಹಿತಿಯನ್ನು ಸ್ವೀಕರಿಸದಿದ್ದರೆ, ಆದರೆ ಕಾರ್ಯಸಂಸ್ಥೆಯನ್ನು ಮುಚ್ಚಲಾಗಿದೆಯೆಂದು ಮನದಟ್ಟು ಮಾಡಿಕೊಂಡರೆ, ಅವನು ಅಂಥ ರಿಜಿಸ್ಟರಿನಿಂದ ಅಂಥ ಕಾರ್ಯಸಂಸ್ಥೆಯನ್ನು ತೆಗೆದುಹಾಕಬಹುದು.

**XXX XXX XXXX**

**6ಎ. ನೇಮಕ ಆದೇಶಗಳನ್ನು ನೀಡುವುದು.-** ಪ್ರತಿಯೊಬ್ಬ ನಿಯೋಜಕನು, ತನ್ನ ಕಾರ್ಯಸಂಸ್ಥೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಕಡೆಯಲ್ಲಿ ನಿಯೋಜಿತನಾದ ಯಾರೇ ವ್ಯಕ್ತಿಗೆ ಅವನ ಹೆಸರು, ಪದನಾಮ, ಅಂಥ ವ್ಯಕ್ತಿಯ ಮಜೂರಿಯ ಪ್ರಮಾಣಪತ್ರ ಮತ್ತು ಆತನ ಕೆಲಸದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಲಿಖಿತದಲ್ಲಿ ತಿಳಿಸಿ, ನೇಮಕ ಆದೇಶವನ್ನು ನೀಡತಕ್ಕದ್ದು ಮತ್ತು ಅದನ್ನು ತನ್ನ ಕಾರ್ಯಸಂಸ್ಥೆಯಲ್ಲಿ ನೇಮಕವಾದ ದಿನಾಂಕದಿಂದ 30 ದಿನಗಳ ಒಳಗಾಗಿ ಅಂಥ ವ್ಯಕ್ತಿಗೆ ತಲುಪುವಂತೆ ಮಾಡತಕ್ಕದ್ದು:

ಪರಂತು, ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 1997ರ ಪ್ರಾರಂಭಕ್ಕೆ ಮೊದಲು ಯಾವುದೇ ಕಾರ್ಯಸಂಸ್ಥೆಯಲ್ಲಿ ನೇಮಕಗೊಂಡಿದ್ದ ನಿಯೋಜಿತರು ಇದ್ದರೆ, ಅಂಥ ಕಾರ್ಯಸಂಸ್ಥೆಯ ನಿಯೋಜಕನು, ಅಂಥ ನಿಯೋಜಿತರಿಗೆ ಲಿಖಿತದಲ್ಲಿ ಯಾವುದೇ ನೇಮಕದ ಆದೇಶವನ್ನು ಇನ್ನೂ ನೀಡಿಲ್ಲದಿದ್ದರೆ, ಅದರಲ್ಲಿ ಅಂಥ ನಿಯೋಜಿತನ ಹೆಸರು, ಪದನಾಮ ಮತ್ತು ಮಜೂರಿಯ ಪ್ರಮಾಣ ಮತ್ತು ಕೆಲಸದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಸೇರಿಸಿ ಆ ನಿಯೋಜಿತನಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು ಮತ್ತು ಅಂಥ ಪ್ರಾರಂಭದ ದಿನಾಂಕದಿಂದ 30 ದಿನಗಳ ಒಳಗಾಗಿ ಅವನಿಗೆ ಅದನ್ನು ಜಾರಿಗೊಳಿಸತಕ್ಕದ್ದು.

**XXX XXX XXX**

**21. ಮಜೂರಿಗಳ ಸಂದಾಯ ಅಧಿನಿಯಮದ ಅನ್ವಯ.-** (1) ಮಜೂರಿಗಳ ಸಂದಾಯ ಅಧಿನಿಯಮ, 1936 (ಕೇಂದ್ರ ಅಧಿನಿಯಮ 1936 ರ IV) ರಲ್ಲಿ (ಈ ಪ್ರಕರಣದಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಏನೇ ಅಡಕವಾಗಿದ್ದಾಗ್ಯೂ, ರಾಜ್ಯ ಸರ್ಕಾರವು

ಅಧಿಸೂಚನೆಯ ಮೂಲಕ, (2)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸದರಿ ಅಧಿನಿಯಮವು ಅಥವಾ ಅದರ ಯಾವುದೇ ಉಪಬಂಧವು, ರಾಜ್ಯ ವಿಧಾನಮಂಡಲವು ಈ ಅಧಿನಿಯಮವನ್ನು ಅಂಗೀಕರಿಸುವ ದಿನಾಂಕದಂದು ಜಾರಿಯಲ್ಲಿದ್ದಂತೆ ಈ ಅಧಿನಿಯಮವು ಅನ್ವಯವಾಗುವಂಥ ಕಾರ್ಯಸಂಸ್ಥೆಗಳಲ್ಲಿನ ನಿಯೋಜಿತರೆಲ್ಲರಿಗೂ ಅಥವಾ ಅವರ ಯಾವುದೇ ವರ್ಗಕ್ಕೆ ಮತ್ತು ಅವರ ನಿಯೋಜಕರಿಗೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಆ ತರುವಾಯ ಸದರಿ ಅಧಿನಿಯಮವು ಅಥವಾ ಅದರ ಉಪಬಂಧಗಳು ನಿಯೋಜಕರಿಗೆ ಮತ್ತು ನಿಯೋಜಿತರಿಗೆ ಈ ಅಧಿನಿಯಮದಲ್ಲಿ ಅಧಿನಿಯಮಿತಗೊಳಿಸಿದ್ದರೆ ಹೇಗೆ ಅನ್ವಯವಾಗತಕ್ಕದ್ದೋ ಹಾಗೆ ಅನ್ವಯವಾಗತಕ್ಕದ್ದು.

(2) ಸದರಿ ಅಧಿನಿಯಮದ ಉಪಬಂಧಗಳನ್ನು (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಕಾರ್ಯಸಂಸ್ಥೆಗೆ ಅನ್ವಯ ಮಾಡಿದ ಮೇಲೆ, ಈ ಅಧಿನಿಯಮದ ಮೇರೆಗೆ ನೇಮಕ ಮಾಡಿದ ಪರಿಶೀಲಕನನ್ನು ಅವನ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಸದರಿ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಪರಿಶೀಲಕನೆಂಬುದಾಗಿ ಭಾವಿಸತಕ್ಕದ್ದು.

**22. ಕಾರ್ಮಿಕರ ನಷ್ಟಪರಿಹಾರ ಅಧಿನಿಯಮದ ಅನ್ವಯ.-** ರಾಜ್ಯ ವಿಧಾನಮಂಡಲವು ಈ ಅಧಿನಿಯಮವನ್ನು ಅಂಗೀಕರಿಸಿದ ದಿನಾಂಕದಂದು ಜಾರಿಯಲ್ಲಿದ್ದಂತೆ ಕಾರ್ಮಿಕ ನಷ್ಟಪರಿಹಾರ ಅಧಿನಿಯಮ, 1923 (ಕೇಂದ್ರ ಅಧಿನಿಯಮ 1923 ರ VIII) ರ ಉಪಬಂಧಗಳು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ರಾಜ್ಯ ಸರ್ಕಾರವು ಅದರ ಮೇರೆಗೆ ರಚಿಸಿದ ನಿಯಮಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ನಿಯೋಜಿತರಿಗೆ ಮತ್ತು ನಿಯೋಜಕರಿಗೆ ಅನ್ವಯವಾಗತಕ್ಕದ್ದು.

**XXX XXX XXX**

**25. ರಾತ್ರಿ ವೇಳೆಯಲ್ಲಿ ಮಹಿಳೆಯರ ನಿಯೋಜನೆಯ ನಿಯಂತ್ರಣ.-** (1) ರಾತ್ರಿ ವೇಳೆಯಲ್ಲಿ ಕೆಲಸ ಮಾಡಲು ಇಚ್ಛಿಸುವ ಮಹಿಳಾ ನಿಯೋಜಿತರಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ರಾತ್ರಿ ವೇಳೆಯಲ್ಲಿ ಅಂಗಡಿ ಅಥವಾ ವಾಣಿಜ್ಯ ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡಲು ಅನುಮತಿ ನೀಡಬಹುದು, ಎಂದರೆ:-

(ಎ) ಅಧಿನಿಯಮದ 7, 8, 9, 10 ಮತ್ತು 12ನೇ ಪ್ರಕರಣಗಳ ಮೇರೆಗೆ ಗೊತ್ತುಪಡಿಸಿದ ನಿಯಂತ್ರಣವು, ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳಾ ನಿಯೋಜಿತರಿಗೆ ಅನ್ವಯವಾಗುವುದು ಮುಂದುವರೆಯತಕ್ಕದ್ದು;

(ಬಿ) ಮಹಿಳಾ ನಿಯೋಜಿತರ ಸಮ್ಮತಿಯನ್ನು ಲಿಖಿತದಲ್ಲಿ ಪಡೆದುಕೊಳ್ಳತಕ್ಕದ್ದು;

(ಸಿ) ಕಾರ್ಯಸಂಸ್ಥೆಯು ಮಹಿಳಾ ನಿಯೋಜಿತಳಿಗೆ, ಆಕೆಯ ನಿವಾಸದಿಂದ ಕಾರ್ಯಸ್ಥಳಕ್ಕೆ ಹೋಗಲು ಮತ್ತು ಹಿಂದಿರುಗಿ ಬರಲು ಸಾರಿಗೆ ಸೌಲಭ್ಯಗಳನ್ನು ಉಚಿತವಾಗಿ ಮತ್ತು ಸಾಕಷ್ಟು ಭದ್ರತೆಯೊಂದಿಗೆ ಒದಗಿಸತಕ್ಕದ್ದು. ಅಂಥ ಸಾರಿಗೆ ಸೌಲಭ್ಯವು ಮಾರ್ಗಪತ್ತೆ (Tracking) ಮಾಡಲು ಮತ್ತು ಮೇಲ್ವಿಚಾರಣೆಗಾಗಿ ಜಾಗತಿಕ ಸ್ಥಳ ಮಾಹಿತಿ ಸೌಲಭ್ಯ(GPS)ವನ್ನು ಹೊಂದಿರತಕ್ಕದ್ದು;

(ಡಿ) ಮಹಿಳಾ ನಿಯೋಜಿತರ ನಿಯೋಜನೆಯು ಸರದಿಯ ಆಧಾರದಲ್ಲಿ ಇರತಕ್ಕದ್ದು;

(ಇ) ಸಾಕಷ್ಟು ಸಂಖ್ಯೆಯ ಭದ್ರತಾ ಸಿಬ್ಬಂದಿಯನ್ನು ರಾತ್ರಿ ಪಾಳಿಯ ವೇಳೆಯಲ್ಲಿ ನಿಯೋಜಿಸತಕ್ಕದ್ದು;

(ಎಫ್) ಗೌಪ್ಯತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗುವಂತೆ, ಮಹಿಳಾ ನಿಯೋಜಿತರುಗಳಿಗೆ ಅಗತ್ಯವಾದ ಸೂಕ್ತ ವಿಶ್ರಾಂತಿ ಕೊಠಡಿಗಳು, ವಿದ್ಯುತ್, ಶೌಚಾಲಯಗಳು, ಲಾಕರ್‌ಗಳು, ಔಷಧಾಲಯ ಸೌಲಭ್ಯ ಮತ್ತು ಸಾಕಷ್ಟು ನೀರು ಪೂರೈಕೆ ಇರುವ ಸ್ವಚ್ಛತಾ ಸೌಲಭ್ಯಗಳನ್ನು ಪ್ರತ್ಯೇಕವಾಗಿ ಒದಗಿಸತಕ್ಕದ್ದು;

(ಜಿ) ಕಾರ್ಯಸಂಸ್ಥೆಯು, ಸ್ವಯಂ ಸೇವಾ ಸಂಸ್ಥೆಗಳಿಂದ ಅಥವಾ ಇತರೆ ಸಂಸ್ಥೆಗಳಿಂದ ಮಹಿಳಾ ನಿಯೋಜಿತರು ಪಡೆದುಕೊಂಡು ಶಿಶುಪಾಲನಾ ಗೃಹದ ವೆಚ್ಚವನ್ನು ಭರಿಸತಕ್ಕದ್ದು;

(ಎಚ್) ಕಾರ್ಯಸಂಸ್ಥೆಯು, ಪ್ರತಿಯೊಬ್ಬ ಚಾಲಕನ ಸ್ವವಿವರಗಳನ್ನು ಪಡೆದುಕೊಳ್ಳತಕ್ಕದ್ದು ಮತ್ತು ತಾವೇ ಸ್ವತಃ ನಿಯೋಜಿಸಿಕೊಂಡ ಎಲ್ಲಾ ಚಾಲಕರ ಪೂರ್ವೋತ್ತರಗಳನ್ನು ನಿಯೋಜನಾ-ಪೂರ್ವದಲ್ಲಿ ಪರಾಮರ್ಶೆ ಮಾಡತಕ್ಕದ್ದು. ಹೊರಗುತ್ತಿಗೆಯ ಮೂಲಕ ನಿಯೋಜಿತರಾದ ಚಾಲಕರ ಕುರಿತು ಅವರ ಸ್ವವಿವರ ಸಂಗ್ರಹಣೆ ಮತ್ತು ಅವರ ಪೂರ್ವೋತ್ತರಗಳನ್ನು ಸೇವಾದಾತನು

ನಿಯೋಜನಾ-ಪೂರ್ವದಲ್ಲಿ ಪರಾಮರ್ಶೆ ಮಾಡಿದ್ದಾನೆಂಬ ಬಗ್ಗೆ ಮನವರಿಕೆಯಾಗಿರುವುದನ್ನು ಕಂಪನಿಗೆ ಖಚಿತಪಡಿಸಿಕೊಳ್ಳತಕ್ಕದ್ದು;

(ಐ) ಮಹಿಳಾ ನಿಯೋಜಿತರನ್ನು, ವಾಹನದಲ್ಲಿ ಹತ್ತಿಸಿಕೊಳ್ಳುವ ಮತ್ತು ಇಳಿಸುವ ಮಾರ್ಗದ ವೇಳಾಪಟ್ಟಿಯನ್ನು ಕೇವಲ ಕಂಪನಿಯ ಮೇಲ್ವಿಚಾರಣಾ ಕಚೇರಿಯೇ ನಿರ್ಧರಿಸತಕ್ಕದ್ದು. ತುರ್ತು ಪರಿಸ್ಥಿತಿಗಳಲ್ಲಿ, ಚಾಲಕರ/ಮಾರ್ಗಗಳ/ಪಾಳಿಗಳ ಬದಲಾವಣೆಯನ್ನು, ಮೇಲ್ವಿಚಾರಣಾ ಅಧಿಕಾರಿಗಳಿಗೆ/ ನಿಯೋಜಿತರುಗಳಿಗೆ ಮೊದಲೇ ತಿಳಿಸಿದ್ದಲ್ಲಿ ಮಾತ್ರವೇ ಅನುಮತಿ ನೀಡತಕ್ಕದ್ದು;

(ಜೆ) ಮಹಿಳಾ ನಿಯೋಜಿತರ ದೂರವಾಣಿ ಸಂಖ್ಯೆ, ಅದರಲ್ಲೂ ನಿರ್ದಿಷ್ಟವಾಗಿ ಮೊಬೈಲ್ ನಂಬರ್,
ಇ-ಮೇಲ್ ವಿಳಾಸ ಮತ್ತು ಮನೆ ವಿಳಾಸಗಳನ್ನು ಅನಧಿಕೃತ ವ್ಯಕ್ತಿಗಳಿಗೆ ಬಹಿರಂಗಪಡಿಸತಕ್ಕದ್ದಲ್ಲ;

(ಕೆ) ಯಾರೇ ಮಹಿಳಾ ನಿಯೋಜಿತರನ್ನು, ಮೊದಲು ಹತ್ತಿಸಿಕೊಳ್ಳದಂತೆ ಹಾಗೂ ಕೊನೆಯಲ್ಲಿ ಇಳಿಸದಂತೆ, ಎಚ್ಚರಿಕೆಯಿಂದ ಮಾರ್ಗಗಳನ್ನು ಆಯ್ಕೆ ಮಾಡತಕ್ಕದ್ದು;

(ಎಲ್) ಕಂಪನಿಯು, ಮಹಿಳಾ ನಿಯೋಜಿತರುಗಳು ರಾತ್ರಿ ಪಾಳಿ ವಾಹನಗಳಲ್ಲಿ ಹತ್ತಿಕೊಳ್ಳುವಾಗ ಅಥವಾ ಕೊನೆಗೆ ಇಳಿದುಕೊಳ್ಳುವಾಗ ಮತ್ತು ಕೆಲಸ ಮಾಡುವ ಸ್ಥಳದಲ್ಲಿ, ಭದ್ರತಾ ಸಿಬ್ಬಂದಿಯನ್ನು ಒದಗಿಸತಕ್ಕದ್ದು;

(ಎಮ್) ಕಂಪನಿಯು ಗೊತ್ತುಪಡಿಸಿದ ಮೇಲ್ವಿಚಾರಕರು ಅಥವಾ ಸೇವಾದಾತರು ಅನೇಕ ಮಾರ್ಗಗಳಲ್ಲಿ ಸಂಚರಿಸುವ ವಾಹನಗಳನ್ನು ಸಾಧ್ಯವಾದಷ್ಟುಮಟ್ಟಿಗೆ, ಯಾದೃಚ್ಛಿಕವಾಗಿ ಪರೀಕ್ಷಿಸತಕ್ಕದ್ದು;

(ಎನ್) ಕಾರ್ಯಸಂಸ್ಥೆಯಲ್ಲಿ, ವಾಹನಗಳ ಚಲನವಲನಗಳ ಮೇಲೆ ನಿಗಾ ಇಡಲು, ನಿಯಂತ್ರಣ ಕೊಠಡಿ/ಟ್ರಾವೆಲ್ ಡೆಸ್ಕ್ ಇರತಕ್ಕದ್ದು;

(ಒ) ಮಹಿಳಾ ನಿಯೋಜಿತರುಗಳು, ತುರ್ತು ಸಮಯದಲ್ಲಿ ಸಂಕೇತಗಳನ್ನು ಕೊಡುವ ಮೂಲಕ ಸಂಬಂಧಪಟ್ಟವರನ್ನು ಸಂಪರ್ಕಿಸಲು ಸಾಧ್ಯವಾಗುವಂತೆ ಮೊಬೈಲ್‌ನಲ್ಲಿನ ಆ್ಯಪ್ ಅನ್ನು, ಕಾರ್ಯಸಂಸ್ಥೆಯು ಅಭಿವೃದ್ಧಿಪಡಿಸಬಹುದು ಮತ್ತು ಅಳವಡಿಸಿಕೊಳ್ಳಬಹುದು; ಮತ್ತು

(ಪಿ) ನಿಯಮಿಸಬಹುದಾದ ಯಾವುದೇ ಇತರ ಷರತ್ತು.

(2) ಮೇಲಿನ ಷರತ್ತುಗಳನ್ನು ಪಾಲಿಸಲು ಯಾವುದೇ ಕಾರ್ಯಸಂಸ್ಥೆಯು ವಿಫಲವಾದರೆ, ಅದರ ನೋಂದಣಿ ಪ್ರಮಾಣಪತ್ರವನ್ನು ರದ್ದುಗೊಳಿಸತಕ್ಕದ್ದು.

**XXX XXX XXX**

**30. ದಂಡನೆಗಳು.-** (1) ಪ್ರಕರಣ 4, 5, 6, 6ಎ 7, 9, 10, 11, 12, 13, 15, 16, [2][x x x][2], 25 ಮತ್ತು 39ರ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ ಅಪರಾಧ ನಿರ್ಣಯವಾದ ಮೇಲೆ ಮೊದಲನೆಯ ಅಪರಾಧಕ್ಕಾಗಿ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಮತ್ತು ಎರಡನೇ ಅಥವಾ ಯಾವುದೇ ತರುವಾಯದ ಅಪರಾಧಕ್ಕಾಗಿ ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಪ್ರಕರಣ 8, 17, 29 ಮತ್ತು 34ರ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ಆಗಲಿ ಅಪರಾಧ ನಿರ್ಣಯವಾದ ಮೇಲೆ ಎರಡು ನೂರಾ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಪ್ರಕರಣ 24 ಹಾಗೂ 25ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಮೊದಲ ಅಪರಾಧಕ್ಕಾಗಿ, ಮೂರು ತಿಂಗಳುಗಳಿಗೆ ಕಡಿಮೆಯಿರದಂಥ, ಆದರೆ ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿರದಂಥ, ಆದರೆ ಇಪ್ಪತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಇವರೆಡರಿಂದ ದಂಡಿತನಾಗತಕ್ಕದ್ದು ಮತ್ತು ಎರಡನೇ ಹಾಗೂ ತರುವಾಯದ ಅಪರಾಧಗಳಿಗಾಗಿ, ಅವನು ಆರು ತಿಂಗಳುಗಳಿಗೆ ಕಡಿಮೆಯಿರದಂಥ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು

**XXX XXX XXX**

**33. ಪರಿಶೀಲಕರು ಮುಂತಾದವರನ್ನು ಅಡ್ಡಿಪಡಿಸಿದ್ದಕ್ಕಾಗಿ ದಂಡನೆ.-** ಈ ಅಧಿನಿಯಮದ ಮೇರೆಗೆ ತನಗೆ ಪ್ರದತ್ತ ಮಾಡಲಾದ ಯಾವುದೇ ಅಧಿಕಾರವನ್ನು ಚಲಾಯಿಸುವ ಪರಿಶೀಲಕನಿಗೆ ಅಥವಾ ಅಂತಹ ಅಧಿಕಾರವನ್ನು ಚಲಾಯಿಸುವಲ್ಲಿ ಪರಿಶೀಲಕನಿಗೆ

ಕಾನೂನುಸಮ್ಮತವಾಗಿ ನೆರವು ನೀಡುತ್ತಿರುವ ಯಾರೇ ವ್ಯಕ್ತಿಗೆ, ಉದ್ದೇಶಪೂರ್ವಕವಾಗಿ ಅಡ್ಡಿಪಡಿಸುವ ಅಥವಾ ಪರಿಶೀಲಕನು ಮಾಡಿದ ಕಾನೂನುಸಮ್ಮತವಾದ ಯಾವುದೇ ನಿರ್ದೇಶನವನ್ನು ಪಾಲಿಸಲು ತಪ್ಪುವ ಯಾರೇ ವ್ಯಕ್ತಿಯು, ಐನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**33-ಎ. ಅಪರಾಧಗಳನ್ನು ರಾಜಿ ಮಾಡಿಕೊಳ್ಳುವುದು.-** (1)ಅಧಿಕಾರವ್ಯಾಪ್ತಿಯುಳ್ಳ ಕಾರ್ಮಿಕ ಅಧಿಕಾರಿಯು, 24ನೇ ಹಾಗೂ 25ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ಹೊರತುಪಡಿಸಿ, ಪ್ರಾಸಿಕ್ಯೂಷನ್ ನಡೆಸುವುದಕ್ಕೆ ಬದಲಾಗಿ, ಮೊದಲನೇ ಸಲದ ಅಪರಾಧಕ್ಕಾಗಿ ಎರಡು ಸಾವಿರ ರೂಪಾಯಿಗಳಿಗೆ ಮೀರದ, ಆದರೆ ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿರದ ಹಾಗೂ ಎರಡನೇ ಅಥವಾ ತರುವಾಯದ ಅಂಥದೇ ಅಪರಾಧಗಳಿಗಾಗಿ, ಐದು ಸಾವಿರ ರೂಪಾಯಿಗಳನ್ನು ಮೀರದ ಆದರೆ ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿರದ ಮೊಬಲಗನ್ನು ವಿಧಿಸಿ ಪ್ರಾಸಿಕ್ಯೂಷನ್‌ನನ್ನು ಆರಂಭಿಸುವ ಮೊದಲು ಅಥವಾ ತರುವಾಯ, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ತಪ್ಪಿತಸ್ಥ ನಿಯೋಜಕನ ಆಯ್ಕೆಯಂತೆ ರಾಜಿ ಮಾಡಿಕೊಳ್ಳಬಹುದು.

**XXX XXX XXX**

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**TENTH SESSION**

## THE KARNATAKA SHOPS AND COMMERCIAL ESTABLISHMENTS (AMENDMENT) BILL, 2026
## (LA Bill No. 23 of 2026)

A Bill further to amend the Karnataka Shops and Commercial Establishments Act, 1961.

Whereas it is expedient further to amend the Karnataka Shops and Commercial Establishments Act, 1961(Karnataka Act 8 of 1962), for the purposes hereinafter appearing.

Be it enacted by the Karnataka State Legislature in the seventy seventh year of the Republic of India, as follows:-

**1. Short title and commencement.-** (1) This Act may be called the Karnataka Shops and Commercial Establishments (Amendment) Act, 2026.

(2) It shall come into force at once.

**2. Amendment of section 3.-** In the Principal Act, in section 3, in sub-section (1), after clause (j), the following shall be inserted, namely:-

"(k) Establishment employing ten or more workers, if already registered under the Occupational Safety, Health and Working Conditions Code, 2020 (Central Act 37 of 2020);

Provided that, no separate registration shall be required for godowns or storage facilities situated within a distance of one hundred meters from the principal establishment."

**3. Amendment of section 4.-** In the Principal Act, in section 4,-

(1) in sub-section (1), after the words "the prescribed form together with such fees", the words "through electronic or digital mode" shall be inserted.

(2) in sub-section (2), after the words "shall issue, in a prescribed form", the words "through electronic or digital mode" shall be inserted.

(3) in sub-section (3A), for the words "thirty days", the words "seven days" shall be substituted.

(4) in sub-section (4), after the words "on payment of such fees", the words "through electronic or digital mode" shall be inserted.

(5) for sub-section (5), the following shall be substituted, namely:-

"(5) The registration once issued under section 4 shall be valid until the closure or cessation of business of the establishment."

(6) sub-section (6) shall be omitted.

(7)in sub-section (8), for the words "an imprisonment of not less than six months and with a fine which may extend to five thousand rupees", the words "with a fine which may extend to fifty thousand rupees" shall be substituted.

**4. Amendment of section 6.-**In the Principal Act, in section 6, for the words "notify to the Inspector in writing", the words "notify to the Inspector through electronic or digital mode" shall be substituted.

**5. Insertion of new sections 6-B and 6-C,.-**In the Principal Act, after section 6A, the following shall be inserted, namely:-

"**6-B. Issue of service certificate.-**Every employer shall issue a service certificate to an employee within seven days from the date of receipt of application from such employee in such form as may be prescribed.

**6-C. Prohibition of retention of documents.-**No employer shall retain original educational certificates, experience certificates or any other original documents of an employee at the time of appointment or during the course of employment."

**6. Amendment of section 21.-** In the Principal Act, in section 21,-

(1) in the heading, for the words "the Payment of Wages Act" the words "the Code on Wages" shall be substituted; and

(2) for the words, figures and brackets "the Payment of Wages Act, 1936 (Central Act IV of 1936)", the words, figures and brackets "the Code on Wages, 2019 (Central Act 29 of 2019)" shall be substituted.

**7. Amendment of section 22.-** In the Principal Act, in section 22,-

(1) in the heading, for the words "the Payment of Wages Act" the words "the Code on Social Security" shall be substituted; and

(2) for the words, figures and brackets "the Workmen's Compensation Act, 1923 (Central Act VIII of 1923)", the words, figures and brackets "the Code on Social Security, 2020 (Central Act 36 of 2020)" shall be substituted.

**8. Amendment of section 25.-** In the Principal Act in section 25, in sub-section (1), clauses (h), (i), (j), (k), (l), (m), (n) and (o) shall be omitted.

**9. Amendment of section 30.-**In the Principal Act, in section 30,-

(i) in sub-section (1),-

(a) after the digit and letter "6A" the digits and letters "6B, 6C" shall be inserted.

(b) for the words "one thousand rupees" the words "three thousand rupees" shall be substituted.

(c) for the words "two thousand rupees" the words "five thousand rupees" shall be substituted.

(ii) in sub-section (2), for the words "two hundred and fifty rupees" the words "two thousand rupees" shall be substituted.

(iii) for sub-section (3), the following shall be substituted, namely**:-**

"(3) Whoever contravenes the provisions of sections 24 and 25 shall be punishable with a fine which shall not be less than ten thousand rupees."

**10. Amendment of section 33.-**In the Principal Act, in section 33, for the words "five hundred rupees", the words "ten thousand rupees" shall be substituted.

**11. Substitution of section 33A.-**In the Principal Act, for section 33A the following shall be substituted, namely**:-**

"**33-A Compounding of offences.-** (1) The jurisdictional Labour officer may compound any offence punishable under this Act or the rules made there under by collecting,-

(a) fifty percent of the prescribed fine for the first offence;

(b) seventy-five percent of the prescribed fine for the second or subsequent offence.

(2) No offence of the same nature shall be compoundable if committed by the same person more than twice with in a period of one year.

(3) No penalty shall be imposed without giving the concerned person a reasonable opportunity of being heard."

**12. Insertion of new section 33B.-**In the Principal Act, after section 33A, the following shall be inserted, namely:-

"**33-B. Appeal.-** (1) Any person aggrieved by an order passed under section 33-A may prefer an appeal to such appellate authority as may be notified by the Government:

(2) Every appeal under sub-section (1) shall be filed within a period of thirty days from the date of receipt of the order.

(3) No appeal shall be entertained unless the amount of fine, as ordered, has been deposited.

(4) An appeal shall be disposed off within a period of sixty days in such manner as may be prescribed.

Provided that, the Appellate Authority shall be an officer not below the rank of Assistant Labour Commissioner."

## STATEMENT OF OBJECTS AND REASONS

It is considered necessary further to amend the Karnataka Shops and Commercial Establishments Act, 1961 (Karnataka Act 8 of 1962) to,-

(1) give exemption to the establishment which are already registered under the Occupational Safety, Health and Working Conditions Code, 2020 (Central Act 37 of 2020) for registeration.

(2) introduction of electronic or digital mode of fee;

(3) issue of service certificate and prohibition of retention of documents by inserting section 6B and 6C respectively;

(4) decriminalising and rationalising offences and to further enhance trust-based governance for ease of living and doing business;

(5) prescribe provisions relating to compounding of offences and for Appeal.

Hence, the Bill.

## FINANCIAL MEMORANDUM

There is no extra expenditure involved in the proposed measures.

**SANTHOSH LAD**
Minister for Labour and Employment

**M.K. VISHALAKSHI**
Secretary
Karnataka Legislative Assembly

## ANNEXURE
## EXTRACT FROM THE KARNATAKA SHOPS AND COMMERCIAL ESTABLISHMENTS ACT, 1961 (KARNATAKA ACT 8 OF 1962)

**XXX XXX XXX**

**3. Exemptions.-** (1) Nothing in this Act shall apply to,-

**XXX XXX XXX**

(j) persons directly engaged in preparatory or complementary work, such as, clearing and forwarding clerks responsible for the despatch of goods.

**XXX** **XXX** **XXX**

**4. Registration of Establishments**.- (1) Within the period specified in sub-section (3), the employer of every establishment shall send to the Inspector of the area concerned, a statement in the prescribed form together with such fees as may be prescribed, containing,-

(a) the name of the employer and the manager, if any;

(b) the postal address of the establishment;

(c) the name, if any, of the establishment; and

(d) such other particulars as may be prescribed.

(2) On receipt of the statement and the fees, the Inspector shall, on being satisfied about the correctness of the statement, register the establishment in the register of establishments in such manner as may be prescribed, and shall issue, in a prescribed form, a registration certificate to the employer. The registration certificate shall be prominently displayed at the establishment.

(3) Within thirty days from the date mentioned in column (2) below in respect of an establishment mentioned in column (1), the statement together with fees shall be sent to the Inspector under sub-section (1).

| Establishments. | | Date from which the period of thirty days to commence. | |
|---|---|---|---|
| (1) | | (2) | |
| (i) | Establishment existing on the date on which this Act comes into force. | (i) | The date on which this Act comes Into force. |
| (ii) | New establishments. | (ii) | The date on which the establishment commences its work. |

(3A) In case the Inspector is not satisfied about the correctness of the statement together with fees under sub-section (3) shall within thirty days from the date of receipt of the same communicate to the employer his decision for refusing

to register the establishment with the reasons therefor, failing which the establishment shall be deemed to have been registered.

(4) A registration certificate issued under sub-section (2), shall be valid for 2[five years]2 and shall be renewed 2[before the expiry of the period of registration certificate on payment of such fees and in such manner as may be prescribed.

(5) The registration certificate issued or renewed before the commencement of the Karnataka Shops and Commercial Establishments (Amendment) Act, 1997 shall, on such commencement, continue to be valid till the expiry of the period of registration certificate already granted and the employer of every such establishment shall renew his registration certificate before the expiry of such period in accordance with sub-section (4).

(6) In case the Inspector is not satisfied about the correctness of the statement or the renewal application or the payment fee prescribed or any other condition of renewal shall within thirty days from the date of receipt of statement together with fees from the employer seeking renewal of registration certificate communicate to the employer his decision for refusing to renew the registration with the reasons therefor, failing which the registration certificate shall be deemed to have been renewed.

(7) In case the certificate of registration or renewal of registration is not received by any employer within the period specified in sub-section (3A) or (6), the employer shall display a self-certification statement sent by Registered Post with Acknowledgement Due to the Registering Authority for registration or renewal, as the case may be, along with the acknowledgement to that effect stating that he has got the deemed benefit. In case the certificate of registration or renewal of registration as the case may be, is received by the employer subsequently, such self certification shall be replaced with a regular certificate as soon as the same is received.

(8) If any employer has falsely claimed the benefit of deemed registration and has displayed such self certificate under sub-section (7), he shall on conviction be punished with an imprisonment of not less than six months and with a fine which may extend to five thousand rupees

**XXX** **XXX** **XXX**

**6. Closing of establishment to be communicated to Inspector.—** The employer shall, within fifteen days of his closing the establishment, notify to the Inspector in writing the date of such closure and return the registration certificate. The Inspector shall, on receiving the information and being satisfied about its correctness, remove such establishment from the register of establishments and cancel the registration certificate:

Provided that if the Inspector does not receive the information, but is otherwise satisfied that the establishment has been closed, he may remove such establishment from such register.

**XXX** **XXX** **XXX**

**6A. Issue of appointment orders.—** Every employer, employing any person in or in connection with his establishment, shall issue an appointment order in writing indicating the name, designation, wage scale of such person and terms and conditions of his employment and serve the same on such person within thirty days from the date of appointment in his establishment:

Provided that in case of employees appointed in any establishment prior to the commencement of the Karnataka Shops and Commercial Establishments (Amendment) Act, 1997, the employer of such establishment shall, if he has not yet issued any appointment order in writing to such employee, communicate in writing to the employee incorporating therein his name, designation and wage scale and the terms and conditions of employment and serve the same on him within thirty days from the date of such commencement.

**XXX** **XXX** **XXX**

**21. Application of the Payment of Wages Act.—** (1) Notwithstanding anything contained in the Payment of Wages Act, 1936 (Central Act IV of 1936) (referred to in this section as "the said Act"), the State Government may, by notification, direct that subject to the provisions of sub-section (2), the said Act or any of the provisions thereof as in force on the date of passing of this Act by the State Legislature shall apply to all or any class of employees and their employers in establishments to which this Act applies, and thereupon, the said Act or the provisions thereof shall be applicable to the employers and employees, as if enacted in this Act.

(2) On the application of the provisions of the said Act to any establishment under sub-section (1), the Inspector appointed under this Act shall be deemed to be the Inspector for the purpose of the enforcement of the provisions of the said Act within the local limits of his jurisdiction.

**22. Application of the Workmen's Compensation Act.—** The provisions of the Workmen's Compensation Act, 1923 (Central Act VIII of 1923), as in force on the date of passing of this Act by the State Legislature, and the rules made thereunder by the State Government for the time being in force shall mutatis mutandis apply to employees and employers of shops and commercial establishments.

**XXX** **XXX** **XXX**

**25. Regulation of employment of women during night.-** (1)A woman employee who is so willing may be allowed to work in a shop or commercial establishment during night subject to the following conditions, namely:-

(a) The regulation stipulated under sections 7, 8, 9, 10 and 12 of the Act shall continue to apply to the women employee working during night shift;

(b) Willingness of women employees shall be obtained in writing;

(c) The establishment shall provide transport facilities from the residence of the woman employee to the workplace and back free of cost and with adequate security. Such transport facility shall have GPS for tracking and monitoring;

(d) Employment of women employee shall be on rotation basis;

(e) Adequate number of security guards shall be posted during night shift;

(f) Sufficient rest rooms, electricity, latrines lockers, dispensary facility and washing facilities with adequate water supply shall be provided separately for women employees so as to secure privacy;

(g) The establishment shall bear the cost of crèche obtained by the women employees from voluntary or other organisations;

(h) The establishment shall obtain Bio-data of each driver and conduct pre-employment screening of the antecedents of all drivers employed on their own. As regards the driver employed through outsourcing, the company shall ensure to its satisfaction that the collection of Bio-data and conduct pre-employment screening of the antecedents of the drivers is carried out by the service provider;

(i) The Schedule of route of pick-up and drop shall be decided by the supervisory office of the company only. In case of exigencies, change of drivers/ routes/shifts shall be allowed only with the prior knowledge of supervisory officers/employees;

(j) The telephone number, particularly mobile phone numbers email ID and address of the women employees shall not be disclosed to unauthorised persons;

(k) Careful selection of routes shall be made in such a way that no women employees shall be picked up first and dropped last;

(l) The company shall provide security guards at work place and night shift vehicles when women employees are being picked up first or dropped last;

(m) The designated supervisors of the company or service provider shall randomly check the vehicles on various routes as for as possible;

(n) The establishment shall have a control room/travel desk for monitoring movement of vehicles;

(o) An App in mobile may be developed and adopted by the establishment through which the women employee can contact the concerned at the time of emergency by giving signal; and

(p) Any other condition as may be prescribed.

(2) If any establishment fails to comply with the above conditions, it shall lead to cancellation of the Registration Certificate.

**XXX** **XXX** **XXX**

**30. Penalties.**— (1) Whoever contravenes any of the provisions of section 4, 5, 6,6A, 7, 9, 10, 11, 12, 13, 15, 16, 25 and 39, shall, on conviction, be punished

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



with fine, which, for a first offence, may extend to one thousand rupees and, for a second or any subsequent offence, may extend to two thousand rupees.

(2) Whoever contravenes any of the provisions of sections 8, 17, 29 and 34 shall, on conviction, be punished with a fine which may extend to two hundred and fifty rupees.

(3) Whoever contravenes the provisions of sections 24 and 25 shall be punishable with imprisonment for a term which shall not be less than three months but which may extend to six months or with fine which shall not be less than ten thousand rupees, but which may extend to twenty thousand rupees or with both, for the first offence and for the second and subsequent offences, he shall be punishable with imprisonment of a term which shall not be less than six months but which may extend to one year.

**XXX XXX XXX**

**33. Penalty for obstructing Inspectors, etc.—** Any person who wilfully obstructs an Inspector in the exercise of any power conferred on him under this Act, or any person lawfully assisting an Inspector in the exercise of such power or who fails to comply with any lawful direction made by an Inspector, shall be punishable with fine which may extend to five hundred rupees.

**XXX XXX XXX**

**33-A Compounding of offences.-** (1) The jurisdictional Labour Officer in lieu of Prosecution may compound the offences punishable under this Act or the rules made thereunder, except the offences punishable under sections 24 and 25, at the option of the offending employer before or after the institution of the prosecution by levying a sum not exceeding rupees two thousand but not less than rupees one thousand for the first offence and for the second or subsequent same offence, a sum not exceeding rupees five thousand but not less than rupees two thousand.

**XXX XXX XXX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU